

# ಜನಪದ ಜೀವನದಲ್ಲಿ ಲೌಕಿಕ-ಆಧ್ಯಾತ್ಮಿಕ ಸಮನ್ವಯ

**ಡಾ. ಡಿ.ಕೆ. ರಾಜೇಂದ್ರ**

ನಮ್ಮ ಪರಂಪರೆಯಲ್ಲಿ ಅಧ್ಯಾತ್ಮ ಎಷ್ಟೊಂದು ಆಳವಾಗಿ ಬೇರೂರಿದೆ ಎಂಬುದನ್ನು ತಿಳಿಯಬೇಕಾದರೆ ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಧರ್ಮ, ನಂಬಿಕೆ, ಅಧ್ಯಾತ್ಮ, ಆಚರಣೆಗಳನ್ನು ಗಮನಿಸಬೇಕು. ಜನಪದರ ಜೀವನದಲ್ಲಿ ಕಂಡುಬರುವ ಅಧ್ಯಾತ್ಮದ ಸ್ವರೂಪವನ್ನು ವಿಶ್ಲೇಷಿಸುವ ಲೇಖಕರು ಕನ್ನಡದ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**"ಧರ್ಮದಿಂದ ದೂರ ಸರಿದ ಸಂಸ್ಕೃತಿಗೆ ಬೆಳವಣಿಗೆಯೂ ಇಲ್ಲ, ಅಸ್ತಿತ್ವವೂ ಇಲ್ಲ. ಸಂಸ್ಕೃತಿ ಧರ್ಮದ ಉತ್ಪನ್ನವಾಗಿರುತ್ತದೆ. ಇಲ್ಲವೆ ಧರ್ಮ ಸಂಸ್ಕೃತಿಯ ಉತ್ಪನ್ನವಾಗಿರುತ್ತದೆ."** ಇದು ಖ್ಯಾತ ವಿಮರ್ಶಕ ಟಿ.ಎಸ್. ಎಲಿಯೆಟ್‌ನ ಮಾತು.

ಮಾನವ ಸಮಾಜದ ನಿರ್ಮಾಣದಲ್ಲಿ ಧರ್ಮ ಮತ್ತು ಸಂಸ್ಕೃತಿಗಳ ಪಾತ್ರ ಪ್ರಮುಖವಾದದ್ದು. ಅವೆರಡಕ್ಕೂ ಇರುವ ಸಂಬಂಧ ಕೂಡ ಅವಿನಾಭಾವವಾದದ್ದು. ಒಂದರ ಹೊರತು ಮತ್ತೊಂದನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಅವೆರಡೂ ಒಂದರಿಂದ ಒಂದು ಪ್ರೇರಿತವಾಗಿ ರೂಪುಗೊಂಡವು. ಆದಿಮಾನವನ ಹುಟ್ಟಿನೊಂದಿಗೇ ಒಂದಲ್ಲ ಒಂದು ರೀತಿಯಲ್ಲಿ ಅದನ್ನು ಕಾಣುತ್ತೇವೆ. ಯಾವ ಒಂದು ಧರ್ಮ-ಸಂಸ್ಕೃತಿಯ ಅರಿವೇ ಇಲ್ಲದೆ ಪ್ರಕೃತಿಯ ಮಧ್ಯೆ ಬದುಕುತ್ತಿದ್ದ ಆದಿಮಾನವನಲ್ಲಿ ಕಾಣಿಸಿಕೊಂಡ ಪ್ರಕೃತಿಯ ಕೆಲವೊಂದು ವೈಚಿತ್ರ್ಯಗಳು, ಘಟನೆಗಳು ಅವನಲ್ಲಿ ಆಶ್ಚರ್ಯ, ಕುತೂಹಲಗಳನ್ನು ಉಂಟುಮಾಡಿದಂತೆಯೇ ಭಯ ಹಾಗೂ ಆತಂಕವನ್ನೂ ಉಂಟುಮಾಡಿದ್ದು ಹೌದು. ಗುಡುಗು, ಸಿಡಿಲು, ಮಿಂಚು, ಅತಿವೃಷ್ಟಿ, ಅನಾವೃಷ್ಟಿ, ರೋಗರುಜಿನಗಳು ಇತ್ಯಾದಿ ಇತ್ಯಾದಿ ಅವನಲ್ಲಿ ಹಲವು ಆಶ್ಚರ್ಯ, ಕುತೂಹಲವನ್ನೂ ಹುಟ್ಟುಹಾಕಿದವು. ಇದೆಲ್ಲ ಯಾವುದೋ ಒಂದು ಅಗೋಚರ ಅಲೌಕಿಕ ಶಕ್ತಿಯ ಪ್ರಭಾವ ಎಂದು ಭಾವಿಸಿ ಭಯಪಟ್ಟದ್ದುಂಟು. ಆ ಭಯವೇ ಅವನಲ್ಲಿ ಹಲವು ನಂಬಿಕೆಗಳನ್ನು ಹುಟ್ಟುಹಾಕಲು ಕಾರಣವಾಯಿತು. ಆ ನಂಬಿಕೆಯಲ್ಲಿನ ಶ್ರದ್ಧೆಯೇ ಹಲವು ಆಚರಣೆಗಳಿಗೆ, ವಿಧಿವಿಧಾನಗಳ ಸೃಷ್ಟಿಗೆ ಕಾರಣವಾದುವು. ಆ ಅಗೋಚರ-ಅಲೌಕಿಕ ಶಕ್ತಿಯೇ ದೇವರು, ಧರ್ಮ, ಆಚಾರ ಮುಂತಾದವುಗಳಿಂದ ಒಟ್ಟುಗೂಡಿ ಸಂಸ್ಕೃತಿಯ ನಿರ್ಮಾಣಕ್ಕೆ ಕಾರಣವಾಯಿತೆನ್ನಬಹುದು. ಹಾಗಾಗಿ ಧರ್ಮ ಮತ್ತು ಸಂಸ್ಕೃತಿ ಪರಸ್ಪರ ಪೂರಕ, ಪೋಷಕವಾಗಿ ಬೆಳೆದು ಬಂದವುಗಳು.

ಹೀಗೆ ಕಾಣಿಸಿಕೊಂಡ ದೇವರು-ಧರ್ಮದ ಕಲ್ಪನೆ, ಸಂಸ್ಕೃತಿಯ ಹುಟ್ಟಿಗೂ ಕಾರಣವಾಗಿ, ನಾವು ಗುರುತಿಸುವ '**ಜನಪದ ಸಂಸ್ಕೃತಿ**'ಯನ್ನು ಅದು ಹುಟ್ಟುಹಾಕಿತು. ನಾವು ಇಂದು ಕಾಣುತ್ತಿರುವ ಶಿಷ್ಟ ಸಮಾಜ, ಶಿಷ್ಟ ಸಂಸ್ಕೃತಿಯ ಅಡಿಪಾಯ ಕೂಡ ಈ ಜನಪದ ಸಂಸ್ಕೃತಿಯೇ. ಜನಪದ ಸಂಸ್ಕೃತಿಗೂ-ಶಿಷ್ಟ ಸಂಸ್ಕೃತಿಗೂ ಕೆಲವೊಂದು ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಗೋಚರಿಸಿದರೂ, ಅವುಗಳ ಅಂತಃಸತ್ವ, ಮೂಲದ ಆಶಯ ಬೇರೆಯಾಗಿಲ್ಲ. ಅವುಗಳ ವಸ್ತು ಬದಲಾಗಿರಬಹುದು, ಆಚರಣಾವಿಧಾನದಲ್ಲಿ ವ್ಯತ್ಯಾಸ ಕಂಡುಬರಬಹುದು, ಆದರೆ ಅವುಗಳ ಆಂತರಿಕ ಸತ್ವ ಒಂದೇ. ಉದಾಹರಣೆಗೆ ನಾವು ಹಬ್ಬಹರಿದಿನಗಳಲ್ಲಿ ಮನೆಯ ಬಾಗಿಲಿಗೆ ಕಟ್ಟುವ ಹಸಿರು ತೋರಣದ ಬದಲು ಪ್ಲಾಸ್ಟಿಕ್ ತೋರಣ, ಪ್ಲಾಸ್ಟಿಕ್ ಹೂಗಳು ಅದರ ಸ್ಥಾನವನ್ನು ತುಂಬಿರಬಹುದು. ಮನೆಯ ಮುಂದೆ ಬೆಳಗ್ಗೆ ಎದ್ದಕೂಡಲೇ ರಂಗವಲ್ಲಿ ಇಟ್ಟು ಅಲಂಕರಿಸುತ್ತಿದ್ದುದ್ದರ ಬದಲು ಇಂದು ಬಣ್ಣದ ಸ್ಟಿಕ್ಕರ್ ಆ ಸ್ಥಾನ ಪಡೆದಿರಬಹುದು, ಹಾಗೆಯೇ ಮುತ್ತೈದೆ ಹೆಣ್ಣುಮಕ್ಕಳು ಹಣೆಗೆ ಇಡುತ್ತಿದ್ದ ಕುಂಕುಮದ ಬದಲು ಅದೇ ರೀತಿಯ ಸ್ಟಿಕ್ಕರ್ ಆ ಸ್ಥಾನವನ್ನು ಆಕ್ರಮಿಸಿರಬಹುದು. ಇವೆಲ್ಲವೂ ಸರಿಯೇ, ಆದರೆ ಹಾಗೆಂದು ಅವುಗಳ ಮೂಲ ಆಶಯ, ನಂಬಿಕೆ, ಸಂಪ್ರದಾಯ, ಸಂಸ್ಕೃತಿ ಇತ್ಯಾದಿ ಕಣ್ಮರೆಯಾಗಿಲ್ಲ. ಅಷ್ಟರ ಮಟ್ಟಿಗೆ ಮೂಲ ಸಂಸ್ಕೃತಿ-ಸಂಪ್ರದಾಯಗಳ ಆಶಯಗಳು ಇಂದಿಗೂ ಜೀವಂತವಾಗಿವೆ.

ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಮಾತು ಗಮನಾರ್ಹವಾಗಿದೆ: ''**ಹಿಂದೂ ಧರ್ಮದ ಆಧ್ಯಾತ್ಮಿಕ ಗುರಿ ಭಗವಂತನನ್ನು ಕಾಣುವುದು. ಹಾಗೆಯೇ ಅದರ ಆಧ್ಯಾತ್ಮಿಕ ನಿಯಮವೇ ಪ್ರತಿಯೊಬ್ಬನಿಗೂ ತನ್ನತನವನ್ನು ಉಳಿಸಿಕೊಳ್ಳುವುದಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ನೀಡುವುದು... ಭಗವತ್ ಪೂಜೆಗೂ, ಪುರುಷಕಾರ ಮತ್ತು ನಂಬಿಕೆಗೂ, ನೈತಿಕತೆ ಮತ್ತು ಆಧ್ಯಾತ್ಮಿಕತೆಗೂ ಯಾವ ವ್ಯತ್ಯಾಸವೂ ಇಲ್ಲ.**'' ಅವರ ದೃಷ್ಟಿಯಲ್ಲಿ ಭಕ್ತಿ, ಪೂಜೆ, ಸೇವೆ, ನೈತಿಕತೆ, ಜೀವನಾದರ್ಶ ಇವುಗಳೇ ಧರ್ಮ-ಅಧ್ಯಾತ್ಮ ಎಲ್ಲವೂ. ''**ಧರ್ಮದ ರಹಸ್ಯವಿರುವುದು ತತ್ತ್ವ ಸಿದ್ಧಾಂತಗಳಲ್ಲಲ್ಲ, ಅವುಗಳ ಅನುಷ್ಠಾನದಲ್ಲಿ-ಒಳ್ಳೆಯದನ್ನು ಮಾಡುವುದು, ಒಳ್ಳೆಯವರಾಗಿರುವುದು ಇದೇ ಧರ್ಮದ ರಹಸ್ಯ**'' ಎಂಬ ಅವರ ವಿಚಾರ ಕೂಡ ಅಷ್ಟೇ ಮಾನ್ಯ. ಮ್ಯಾಥ್ಯೂ ಆರ್ನಾಲ್ಡ್ ಹೇಳುವಂತೆ: ''**ಮೃಗತ್ವವನ್ನು ಕಳೆದು ಮನುಷ್ಯತ್ವವನ್ನು ರೂಪಿಸುವುದೇ ಸಂಸ್ಕೃತಿ**'' ಎಂಬ ಮಾತೂ ಕೂಡ ಅದಕ್ಕೆ ಪುಷ್ಟಿ ನೀಡುತ್ತದೆ.

'**ಅಧ್ಯಾತ್ಮ**' ಎಂದ ಕೂಡಲೇ ನಮ್ಮ ಆಲೋಚನೆಗಳು, ಭಾವನೆಗಳು ಮುಗಿಲೆತ್ತರಕ್ಕೆ ಹಾರಿ ಅಲೌಕಿಕ ಜಗತ್ತಿನಲ್ಲಿ ನಿಂತು ಆಲೋಚಿಸುವುದುಂಟು. ವೇದ ಉಪನಿಷತ್ತುಗಳತ್ತ ವಾಲುವುದುಂಟು. ಆದರೆ ಅದರ ಅರ್ಥವನ್ನು ಸರಳವಾಗಿ, ಸಾಮಾನ್ಯರ ದೃಷ್ಟಿಯಲ್ಲಿ, ವಾಸ್ತವದ ನೆಲೆಯಲ್ಲಿ ನಿಂತು ಆಲೋಚಿಸುವುದಾದರೆ – ಸ್ವಾಮಿ ಪುರುಷೋತ್ತಮಾನಂದರು ಭಾವಿಸುವಂತೆ: ''**ಆತ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವುದಕ್ಕಾಗಿ ಮಾಡುವ ಕ್ರಮಬದ್ಧ ಪ್ರಯತ್ನವೇ — ಅಧ್ಯಾತ್ಮ ಸಾಧನೆ.**'' ಹಾಗೆ ನೋಡಿದರೆ ನಮ್ಮ ಪ್ರತಿಯೊಂದು ವರ್ತನೆ, ನಡೆನುಡಿ, ಆಚಾರ, ಸಂಪ್ರದಾಯ ಇವೆಲ್ಲವೂ ಆಧ್ಯಾತ್ಮದ ಉತ್ಪನ್ನವೇ ಆಗುತ್ತವೆ. ಜನಪದರು ಭಾವಿಸುವಂತೆ 'ಮೇಲೊಬ್ಬ ಇದ್ದಾನೆ' ಎಂಬ ಶ್ರದ್ಧೆ-ಭಕ್ತಿಯಿಂದ ನಡೆದುಕೊಳ್ಳುವುದು. 'ಹೆಚ್ಚು ಕಮ್ಮಿಯಾದರೆ ಎಲ್ಲವನ್ನೂ ಅವನೇ ನೋಡಿಕೊಳ್ಳುತ್ತಾನೆ' ಎಂಬ ನಂಬಿಕೆಯಿಂದ ಶ್ರದ್ಧೆಯಿಟ್ಟು ಬದುಕನ್ನು ನಡೆಸುವುದು, ಅಧ್ಯಾತ್ಮ.

'ಜನಪದ','ಜಾನಪದ' ಎಂದಾಕ್ಷಣ ನಮಗೆ ಥಟ್ಟನೆ ನೆನಪಾಗುವುದು ಜನಪದರು, ಅವರ ಕಥೆ, ಗೀತೆಗಳು, ಗಾದೆ- ಒಗಟುಗಳು, ಹಬ್ಬ-ಹರಿದಿನಗಳು, ಅಡುಗೆ-ಉಡುಗೆ, ಆಟ-ಸಂಪ್ರದಾಯಗಳು, ಅವರ ಸಂಸ್ಕೃತಿ ಹಾಗೂ ಇವೆಲ್ಲಕ್ಕೂ ಕಾರಣವಾದ ಆ ಒಂದು ಸಮಾಜದ ಅನಕ್ಷರಸ್ಥ-ಆದರೆ, ಅನಾಗರಿಕ ಅಥವಾ ಅಜ್ಞಾನಿಗಳಲ್ಲದ ಒಂದು ಜನಸಮುದಾಯ ಹಾಗೂ ಅದನ್ನೊಳಗೊಂಡ ಒಂದು ಸಮಾಜ. ನೆಲ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆದುಬಂದ ಈ ಒಂದು ಗುಂಪು ತನ್ನದೇ ಆದ ವಿಶಿಷ್ಟ ಆಚಾರ, ವಿಚಾರ, ನಂಬಿಕೆ, ಧರ್ಮ ಮುಂತಾದುವನ್ನು ಕಾಯ್ದುಕೊಂಡು ಬಂದದ್ದು. ಶಿಷ್ಟ ಸಮಾಜದಿಂದ, ಸಂಸ್ಕೃತಿಯಿಂದ ಇದು ಭಿನ್ನವಾಗಿ ತೋರಿದರೂ, ತನ್ನದೇ ಆದ ಹಿರಿಮೆಗರಿಮೆಗಳನ್ನು ಹೊಂದಿ ಯಾವುದೇ ಆಡಂಬರವಿಲ್ಲದೆ ಬದುಕನ್ನು ಕಟ್ಟಿಕೊಂಡು ಸರಳತೆಯೊಂದಿಗೆ ನೈಜತೆಯನ್ನೂ ಮೈಗೂಡಿಸಿಕೊಂಡು ಬೆಳೆದುಬಂದ ಸಮಾಜ.

ಸಂಸ್ಕೃತಿ ಇಲ್ಲದ ಸಮಾಜವಿಲ್ಲ. ಇರಲು ಸಾಧ್ಯವೂ ಇಲ್ಲ. ಪ್ರತಿಯೊಂದು ಸಮಾಜದಲ್ಲಿಯೂ ಅಂತಹುದೊಂದು ಸಂಸ್ಕೃತಿ ಇದ್ದೇ ಇರುತ್ತದೆ. ಇಲ್ಲವಾದರೆ ಅದು 'ಸಮಾಜ' ಎಂದು ಕರೆಸಿಕೊಳ್ಳುವುದಾದರೂ ಹೇಗೆ? ಒಂದು ಸಂಸ್ಕೃತಿ ಆ ಒಂದು ಸಮಾಜದ ಅದೆಷ್ಟೋ ವರ್ಷಗಳ ಶ್ರಮದ ಫಲ. ಪ್ರತಿಯೊಂದು ಸಮಾಜಕ್ಕೂ, ಜನಾಂಗಕ್ಕೂ ಅದರದ್ದೇ ಆದ ಒಂದು ಸಂಸ್ಕೃತಿ ನಿರ್ಮಾಣಗೊಂಡಿರುತ್ತದೆ. ಅಲ್ಲಿಯ ವ್ಯತ್ಯಾಸಗಳು ದೋಷವೆಂದಲ್ಲ, ಆಯಾ ಸಂಸ್ಕೃತಿಯ ವಿಶಿಷ್ಟ ಗುಣಗಳು ಅಷ್ಟೆ. 'one man's food is another man's poison ' ಎಂಬಂತೆ ಅದು ಭಿನ್ನವಾಗಿ ತೋರುವುದು ಸಹಜ.

ಇಂತಹ ಒಂದು ಸಂಸ್ಕೃತಿ-ಸಮಾಜ, ಶಿಷ್ಟಸಮಾಜ-ಸಂಸ್ಕೃತಿಗಿಂತ ಭಿನ್ನವಾದದ್ದು. ಅದಕ್ಕೂ ಕೂಡ ಅದರದ್ದೇ ಆದ ವೈಶಿಷ್ಟ್ಯಗಳಿರುತ್ತವೆ. ಆದರೆ ಅದೂ ಕೂಡ ಜನಪದ ಸಮಾಜದ-ಸಂಸ್ಕೃತಿಯ ಮುಂದುವರಿಕೆ ಎಂಬುದನ್ನು ನೆನಪಿಡಬೇಕು- ನಾಗರಿಕತೆ ಎಂಬ ಹೆಸರಿನಲ್ಲಿ ಅದನ್ನು ಗುರುತಿಸಲಾಗುತ್ತದೆ ಅಷ್ಟೆ. ಆಲೋಚನೆಗಳು, ಭಾವನೆಗಳು, ನಂಬಿಕೆಗಳು, ದೇವರು, ಧರ್ಮ, ಇವು ಎರಡೂ ಸಮಾಜದಲ್ಲಿಯೂ ಇವೆಯಾದರೂ ಅವುಗಳ ಆಚರಣಾ ವಿಧಾನದಲ್ಲಿ ವ್ಯತ್ಯಾಸಗಳು ಗೋಚರಿಸುತ್ತವೆ.

ಜನಪದ ಜೀವನದಲ್ಲಿನ ಯಾವುದೇ ಬದಲಾವಣೆ ಮಂದಗತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಕಂಡರೂ ಹಲವು ವಿರೋಧಗಳ ನಡುವೆ ಮೆಲ್ಲನೆ ಅಡಿಯಿಡುತ್ತವೆ. ಒಂದು ಮಿತಿಯಲ್ಲಿ ಎಲ್ಲವೂ ಕ್ರಮೇಣ ಕಾಲಿಡತೊಡಗುವುದು ಗೋಚರಿಸುತ್ತದೆ. ಬದುಕಿನಲ್ಲಿ ಎದುರಾದುದನ್ನು ಧೈರ್ಯದಿಂದ ಸ್ವಾಗತಿಸುತ್ತ, ಇಲ್ಲದುದಕ್ಕೆ ಹೆಚ್ಚು ದುಃಖಪಡದೆ, ಇರುವುದರಲ್ಲಿ ಸಂತೋಷಪಡುವ ಸಂಪನ್ನತೆಯ ಸಂತೃಪ್ತಿಯ ಜೀವನ ವಿಧಾನವನ್ನು ಜನಪದದಲ್ಲಿ ಕಾಣುತ್ತೇವೆ. ಅವರ ಜೀವನದಲ್ಲಿ ಆಸೆ ಆಕಾಂಕ್ಷೆಗಳ ಮಿತಿ ಎದ್ದು ಕಾಣುತ್ತದೆ, ಬದಲಾಗಿ ಬದುಕಿನ ಬದ್ಧತೆ ಅತಿಯಾಗಿ ಎದ್ದು ತೋರುತ್ತದೆ.

ಜನಪದರ ಲೌಕಿಕ ಬದುಕು ಹೆಚ್ಚು ಆಡಂಬರವಿಲ್ಲದ, 'ಹಾಸಿಗೆ ಇದ್ದಷ್ಟು ಕಾಲು ಚಾಚಿ ಬದುಕುವ' ರೀತಿಯದ್ದು. ಹಾಗೆಂದು ಅದರಲ್ಲಿ ಇರಬೇಕಾದ ಯಾವ ಒಂದು ಅಗತ್ಯ ಅಂಶಕ್ಕೂ ಕೊರತೆಯುಂಟುಮಾಡಿಕೊಂಡವರಲ್ಲ. ಜನಪದ ಜೀವನದಲ್ಲಿ ನೆಲಕ್ಕೂ-ಬದುಕಿಗೂ ನಿಕಟ ಸಂಬಂಧವಿರುವುದು ಸ್ಪಷ್ಟ. ಇಲ್ಲಿ 'ನೆಲ' ಎಂದರೆ ಅವರು ಜನ್ಮತಳೆದು ಬದುಕನ್ನು ಕಟ್ಟಿಕೊಳ್ಳಲು ಆಶ್ರಯ ನೀಡಿದ ಸ್ಥಳ. ಆ ನೆಲದ ಸಂಸ್ಕೃತಿಯೇ ಅವರ ಬದುಕಿನ ಮಾರ್ಗದರ್ಶಿ. ಅದರಿಂದಲೇ ತಮ್ಮ ಬದುಕನ್ನು ಕಂಡುಕೊಂಡವರು. ಅಲ್ಲಿ ಭಿನ್ನತೆಗಿಂತ ಹೊಂದಾಣಿಕೆಯೆ ಎಲ್ಲವೂ. ಅವರದ್ದು

ಅವಿಭಕ್ತ ಕುಟುಂಬ ವ್ಯವಸ್ಥೆ. 'ಕೂಡಿ ಬಾಳಿದರೇ ಸುಖ' ಎಂಬ ನಂಬಿಕೆ, ವಿಶ್ವಾಸ. ಆ ಹೊಂದಾಣಿಕೆ ಎಲ್ಲದರಲ್ಲಿಯೂ ಗೋಚರಿಸುತ್ತದೆ.

ಜನಪದರಲ್ಲಿ ಲೌಕಿಕಬದುಕು-ಆಧ್ಯಾತ್ಮಿಕ ಬದುಕು ಬೇರೆ ಬೇರೆ ಅಲ್ಲ. ಹಾಗೆ ನೋಡಿದರೆ 'ಅಧ್ಯಾತ್ಮ'ದ ಅರಿವೇ ಅವರಿಗೆ ಬಾರದೆ, ಅದು ಅವರ ಲೌಕಿಕ ಬದುಕಿನಲ್ಲಿಯೇ ಅಂತರ್ಗತವಾಗಿರುವ ಒಂದು ಅಂತಃಶಕ್ತಿಯಾಗಿ ತೋರುತ್ತದೆ. ಅವರ ವೃತ್ತಿಜೀವನದ ಹಾಗೂ ನಿತ್ಯಜೀವನದ ಪ್ರತಿಯೊಂದು ಹೆಜ್ಜೆಯಲ್ಲಿಯೂ, ಘಟ್ಟದಲ್ಲಿಯೂ ಅವೆರಡೂ ಮಿಳಿತವಾಗಿಯೇ ಹೊರಹೊಮ್ಮಿರುವುದನ್ನು ಗುರುತಿಸಬಹುದು. ಅವರು ಬೆಳಗ್ಗೆ ಎದ್ದ ಕೂಡಲೇ ಕೈ ಮುಗಿಯುವುದು ಸೂರ್ಯದೇವನಿಗೆ, ಮುಖ ನೋಡುವುದು ತನ್ನ ಉಳುಮೆಗೆ ಕಾರಣನಾದ ಬಸವಣ್ಣನನ್ನು, ಪ್ರಾರ್ಥನೆ ಸಲ್ಲಿಸುವುದು ಬೀಸುವ ರಾಗಿಕಲ್ಲಿಗೆ ಹಾಗೂ ಬೆಳೆ ನೀಡುವ ಭೂಮಿತಾಯಿಗೆ :

**ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಾಲಿ**
**ಎಳ್ಳು ಜೀರಿಗೆ ಬೆಳೆಯೋಳ । ಭೂಮಿ ತಾಯ ।**
**ಎದ್ದೊಂದು ಗಳಿಗೆ ನೆನೆದೇನು ॥**

**ರಾಗಿಯ ಕಲ್ಲೆ ರಾಜು ಮುತ್ತಿನ ಕಲ್ಲೆ**
**ಹುಟ್ಟಿದ ಮನೆಯ ರತಗಲ್ಲೆ । ಸರಸತಿಯೆ ।**
**ಸಾಕಮ್ಮ ತಾಯಿ ರತವೇರು ॥**

ಕುಟ್ಟುವಾಗ, ಬೀಸುವಾಗ, ಬಿತ್ತುವಾಗ, ಕಳೆ ಕೀಳುವಾಗ, ಗಾಡಿ ಹೊಡೆಯುವಾಗ — ಹೀಗೆ ಬದುಕಿನ ಎಲ್ಲ ಸಂದರ್ಭದಲ್ಲಿಯೂ ಅವರ ಶ್ರದ್ಧೆ, ನಂಬಿಕೆ, ಭಕ್ತಿ, ಕೃತಜ್ಞತೆಯ ಭಾವನೆಗಳು ಗರಿಗೆದರುತ್ತವೆ. ಅವರು ದೇವರನ್ನು ಎಲ್ಲಿಯೋ ಹುಡುಕಲು ಹೋಗುವುದಿಲ್ಲ, ತಾವು ಮಾಡುವ ವೃತ್ತಿಯಲ್ಲಿ, ಅದಕ್ಕೆ ನೆರವಾದ ವಸ್ತುವಿನಲ್ಲಿ, ಹೊತ್ತುಹೆತ್ತು ಸಾಕಿದ ತಂದೆ ತಾಯಿಯರಲ್ಲಿ ದೇವರನ್ನು ಕಾಣುತ್ತಾರೆ. ಅಂತಹ ಒಂದು ಸಂಪನ್ನ ಬದುಕು, ಸಂಸ್ಕೃತಿ ಜನಪದರದ್ದು:

**ಕಾಶಿಗೆ ಹೋಗಲಿಕ ಏಸೊಂದು ದಿನ ಬೇಕ**
**ತಾಸೊತ್ತಿನಾದಿ ತವರೂರು । ಮನೆಯಾಗ ।**
**ಕುಂತವಳೆ ಕಾಶಿ ಹಡೆದವ್ವ ॥**

**ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ**
**ಸ್ವಾಮಿ ಚೆಲುವಯ್ಯನ ಸಿರಿಪಾದ । ನೆನೆದಾರೆ**
**ಬಂದೋಟು ಪಾಪ ಪರಿಹಾರ ॥**

'ತಂದೆಯ ನೆನೆದಾರೆ ತಂಗೂಳು ಬಿಸಿಯಾಯ್ತು, ಹೆತ್ತ ತಾಯವ್ವನ ನೆನೆದಾರೆ ಮಾಸೀದ ತಲೆಯು ಮಡಿಯಾಯ್ತು.' ಇಂತಹ ಶ್ರದ್ಧೆ, ಭಕ್ತಿಯಿಂದ ಜನಪದರ ಜೀವನದಲ್ಲಿ ಲೌಕಿಕ-ಅಧ್ಯಾತ್ಮ ಎರಡರ ಸಮನ್ವಯ ಎದ್ದು ಕಾಣುತ್ತದೆ. ಅವರಿಗೆ 'ಕಾಶಿ' ಎಲ್ಲಿಯೋ ದೂರದಲ್ಲಿಲ್ಲ, ತನ್ನ ತವರೇ ಕಾಶಿ, ಹಾಗೆಯೇ ಅತ್ತೆ, ಮಾವ, ಗುರು ಎಲ್ಲರೂ ಅವರಿಗೆ ದೈವಸಮಾನರೆ. 'ಬಡತನ ನನಗಿರಲಿ ಬಹಳ ಮಕ್ಕಳಿರಲಿ, ಬಡತನದ ಚಿಂತೆ ನಿನಗಿರಲಿ ಎಂದು ಎಲ್ಲವನ್ನೂ ದೇವರ ಮೇಲೆ ಭಾರ ಹಾಕಿ ಬದುಕುವ' ಬದುಕು ಅವರದ್ದು. ಹಾಗಾಗಿಯೇ ಅವರಲ್ಲಿ ಸುಸಂಸ್ಕೃತ ಮನಸ್ಸು, ಮಾನವೀಯತೆ ಮೆರೆದಾಡುತ್ತದೆ. ಒಂದು ಸಣ್ಣ ಉಪಕಾರವೆಸಗಿದವರನ್ನೂ ಅವರು ಕೃತಜ್ಞತೆಯಿಂದ ನೆನೆಯುತ್ತಾರೆ:

**ಕಲ್ಲು ಕೊಟ್ಟವ್ವಗೆ ಎಲ್ಲ ಭಾಗ್ಯವು ಬರಲಿ**
**ಪಲ್ಲಕ್ಕಿ ಮೇಲೆ ಮಗ ಬರಲಿ । ತಾಯಮ್ಮ ।**
**ಮಲ್ಲಿಗೆ ಹೂವಿನಂತ ಸೊಸೆ ಬರಲಿ ॥**

ಜನಪದ ಜೀವನದಲ್ಲಿ 'ಅಧ್ಯಾತ್ಮ' ಪ್ರತ್ಯೇಕವಾಗಿ ಪರಿಗಣಿತವಾದುದಲ್ಲ. ನಿತ್ಯಜೀವನದಿಂದ ದೂರವಾದದ್ದಲ್ಲ. ಅದರಲ್ಲಿಯೇ ಮಿಳಿತವಾದದ್ದು. ಆಧ್ಯಾತ್ಮಿಕತೆ, ನೈತಿಕತೆ- ಇವಾವುದರ ಪರಿವೆಯೂ ಅವರಿಗಿದ್ದಂತೆ ತೋರುವುದಿಲ್ಲ. ಆದರೆ ಅವೆಲ್ಲವನ್ನೂ ಬದುಕಿನ ಒಂದು ಭಾಗವಾಗಿ ಅಳವಡಿಸಿಕೊಂಡು ಬದುಕಿದವರು, ಬಾಳಿದವರು. ಆಧ್ಯಾತ್ಮಿಕತೆ ಎಂದರೆ ಅವರ ದೃಷ್ಟಿಯಲ್ಲಿ ನೀತಿ, ನ್ಯಾಯ, ಧರ್ಮದಿಂದ ನಡೆದುಕೊಳ್ಳುವುದು. ಇತರರಿಗೆ ನೋವುಂಟುಮಾಡದೆ, ಮೋಸಮಾಡದೆ ಪರೋಪಕಾರ ಬುದ್ಧಿಯಿಂದ ಬದುಕನ್ನು ನಡೆಸುವುದೆಂದಷ್ಟೇ ಅರ್ಥ. ಅದನ್ನು ಅವರ ಎಲ್ಲ ಆಚಾರ, ವಿಚಾರ, ವ್ಯವಹಾರಗಳಲ್ಲಿಯೂ ಕಾಣಬಹುದು. 'ಮೋಸ ಮಾಡಿದವನ ಹೆಸರ ಮಗನಿಗಿಡಬೇಕು' ಎಂಬ ಅಚ್ಚರಿ ಹುಟ್ಟಿಸುವ ಉದಾತ್ತ ಭಾವನೆಗಳು ಅವರ ಹೃದಯಾಂತರದಿಂದ ಹೊರಹೊಮ್ಮಿದುದನ್ನು ಕಂಡಾಗ ಅವರ ಹೃದಯ ವೈಶಾಲ್ಯ ಹೆಮ್ಮೆ ತರುತ್ತದೆ. ದ್ವೇಷಕ್ಕೆ ಬದಲಾಗಿ ಯಾವ ರೂಪದಲ್ಲಾದರೂ ಅಂತಹವರನ್ನು ಪರಿವರ್ತಿಸುವ ಮನೋಭಾವವಾಗಿ ಅದು ಗೋಚರಿಸುತ್ತದೆ.

ಜನಪದರು ದೇವರನ್ನು ನಂಬಿ ಬದುಕಿದವರು. ಧರ್ಮವನ್ನು ಆಶ್ರಯಿಸಿ ಕಾರ್ಯೋನ್ಮುಖರಾದವರು. ನಂಬಿಕೆಯಲ್ಲಿಯೇ ನೆಮ್ಮದಿ ಕಂಡವರು. ಎಲ್ಲದರಲ್ಲಿಯೂ ದೇವರನ್ನು ಕಂಡವರು. ಹಾಗಾಗಿಯೇ-ಭಕ್ತಿ, ಗೌರವ, ನಯ, ವಿನಯ, ಶ್ರದ್ಧೆ, ನಂಬಿಕೆ, ವಿಶ್ವಾಸ ಇವೆಲ್ಲವೂ ಆವೊಂದು ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿವೆ. ಪ್ರೀತಿ, ಪ್ರೇಮ, ಆತ್ಮೀಯಗುಣ ಮುಂತಾದ ಮಾನವೀಯ ಭಾವನೆಗಳಿಗೂ ಅಲ್ಲಿ ಸ್ಥಾನವಿದೆ. ಧರ್ಮ-ಅಧರ್ಮದ ವಿವೇಕ, ವಿವೇಚನೆ ಎಲ್ಲವೂ ಅದರಲ್ಲಿ ಮಿಳಿತಗೊಂಡಿವೆ. ಹಿರಿಯರ ಬಗ್ಗೆ, ಹೆತ್ತು ಹೊತ್ತು ಸಾಕಿ ಸಲಹಿದ ತಂದೆ ತಾಯಿಯ ಬಗ್ಗೆ ಅವರಿಗಿರುವ ಭಕ್ತಿ, ಗೌರವಭಾವನೆ ದೇವರ ಮೇಲಿಟ್ಟಷ್ಟೇ ಪೂಜನೀಯವಾಗಿ ವ್ಯಕ್ತಗೊಂಡಿದೆ. ಆಧುನಿಕತೆಯ ಹೆಸರಿನಲ್ಲಿ, ನಾಗರಿಕತೆಯ ಸೋಗಿನಲ್ಲಿ ಕಳೆಗುಂದುತ್ತಿರುವ ಇಂತಹ ಭಾವನೆಗಳು ಜನಪದ ಸಂಸ್ಕೃತಿಯಲ್ಲಿ ದಟ್ಟೈಸಿ ವಿಜೃಂಭಿಸುತ್ತಿದ್ದುದನ್ನು ಕಾಣಬಹುದು. ಈ ಎಲ್ಲ ಭಾವನೆಗಳು, ಗುಣ

ಗಳು ಜನಪದ ಸಂಸ್ಕೃತಿಯ ಆಭರಣ. ಅದರ ಶ್ರೀಮಂತಿಕೆಗೆ ಅವೆಲ್ಲವೂ ಸಾಕ್ಷಿ. ಗೃಹಸ್ಥ ಜೀವನದ ಮೌಲ್ಯಗಳಾಗಿ ಅವು ಗೋಚರಿಸುತ್ತವೆ:

**ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು**
**ಹೊತ್ತಾಗಿ ನೀಡಿದರು ಉಣಬೇಕು । ನನ ಕಂದ ।**
**ತೌರಿಗೆ ಹೆಸರ ತರಬೇಕು ।।**

ಗಂಡನ್ನು ಹುಡುಕಲು ಹೋಗುವ ಪ್ರಾರಂಭದಲ್ಲಿಯೇ, ಹೆಣ್ಣಿನ ಕಡೆಯವರು – 'ಹುಡುಗನಿಗೆ ತಂದೆ ತಾಯಿ ಇದ್ದಾರೆಯೇ' ಎಂದು ಧ್ವನಿಪೂರ್ಣವಾಗಿ ಕೇಳಿ ತಿಳಿದುಕೊಳ್ಳುವ ಈ ಸಂದರ್ಭದಲ್ಲಿ ; ಹೆತ್ತ ತಾಯಿ ತನ್ನ ಮಗಳನ್ನು ತೌರಿನಿಂದ ಗಂಡನ ಮನೆಗೆ ಕಳುಹಿಸಿಕೊಡುವಾಗ ಮಾಡುವ ಈ ನೀತಿ ಬೋಧೆ ಅಚ್ಚರಿ ಹುಟ್ಟಿಸುತ್ತದೆ. ನೈತಿಕತೆಯನ್ನು ಬಿಂಬಿಸುವ ಈ ಹಿತನುಡಿಗಳು ಸಂಸ್ಕೃತಿಯ ಪ್ರತೀಕವಾಗಿ ತೋರುತ್ತವೆ.

ಮನಸ್ಸನ್ನು ಶುದ್ಧಿಗೊಳಿಸಿಕೊಳ್ಳುವ ಕ್ರಿಯೆಯೇ ಅಧ್ಯಾತ್ಮದ ಮೊದಲ ಹೆಜ್ಜೆಯಾಗುತ್ತದೆ. ಅಸೂಯೆ, ಕೇಡು, ದ್ವೇಷ ಇವುಗಳಿಂದ ಮುಕ್ತವಾದ ಮನಸ್ಸು ಶಾಂತಿ, ನೆಮ್ಮದಿ, ಸುಖದ ಆಗರವಾಗಬಲ್ಲದು. ಒಂದರ್ಥದಲ್ಲಿ ಇದೇ ಅಧ್ಯಾತ್ಮ. ಜನಪದರಲ್ಲಿ ಅದು ಲೌಕಿಕದೊಂದಿಗೆ ಮಿಳಿತವಾಗಿಯೇ ಹೊರಹೊಮ್ಮಿದೆ. ನಿಜವಾದ ಜೀವನ ಪ್ರೀತಿ, ಅವರಿಂದ ಇದನ್ನೆಲ್ಲ ಸಾಧ್ಯವಾಗಿಸಿದೆ:

**ಹಾಲುಂಡ ತವರಿಗೆ ಏನೆಂದು ಹಾಡಲಿ**
**ಹೊಳೆದಂಡೆಲಿರುವ ಗರಕೀಯ । ಕುಡಿ ಹಂಗೆ ।**
**ಹಬ್ಬಲಿ ಅವರ ರಸಬಳ್ಳಿ ।।**

ತಾಯಿ ಮನೆಯಿಂದ ಗಂಡನ ಮನೆ ಸೇರಿದ ಹೆಣ್ಣು ಮಗಳೊಬ್ಬಳು ತನ್ನ ತೌರನ್ನು, ತಂದೆ, ತಾಯಿ, ಅಣ್ಣ, ತಮ್ಮ, ತಂಗಿಯರನ್ನು ನೆನೆದು ಹಂಬಲಿಸಿ ಹರಸುವ ರೀತಿ ಇದು. ಅವರೊಂದಿಗಿನ ಪ್ರೀತಿ, ಬಾಂಧವ್ಯ, ವಾತ್ಸಲ್ಯ ಅಗಲಿಕೆಯ ದುಃಖ ಎಲ್ಲವೂ ಮಿಶ್ರಣಗೊಂಡು ಅಭಿವ್ಯಕ್ತವಾಗಿರುವುದನ್ನು ಇಲ್ಲಿ ಕಾಣುತ್ತೇವೆ. ನಿಷ್ಕಲ್ಮಷವಾದ ಶುದ್ಧ ಮನಸ್ಸಿನಿಂದ ಹೊರಹೊಮ್ಮಿದ ಅಭಿಮಾನ ತುಂಬಿದ ನುಡಿಗಳು ಇವು.

ಜನಪದರ ಬದುಕು ಆಡಂಬರವಿಲ್ಲದ್ದು. ಶ್ರದ್ಧೆ, ನಂಬಿಕೆ, ಪ್ರೀತಿ ಇವುಗಳಿಂದ ಕೂಡಿದ್ದು. ಮುಗ್ಧಭಾವ ಅಲ್ಲಿ ಎದ್ದು ಕಾಣುತ್ತದೆ. ವಾತ್ಸಲ್ಯಭಾವ ತುಂಬಿ ತುಳುಕುವುದನ್ನು ಅಲ್ಲಿ ಕಾಣಲು ಸಾಧ್ಯ. ಅದು ಜೀವನ ಪ್ರೀತಿಯಿಂದ ಬಂದದ್ದು. ಅವರ ಜೀವನದ ಆದರ್ಶಗಳು, ಜೀವನಮೌಲ್ಯಗಳು ಅವರ ಬಾಳನ್ನು ಶ್ರೀಮಂತಗೊಳಿಸಿವೆ. ಅವರ ಗೃಹಸ್ಥಜೀವನದ ಮೌಲ್ಯಗಳು ಅವರ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಪ್ರತಿಯೊಂದು ಹಂತದಲ್ಲಿಯೂ ಜನಪದರು ಅದನ್ನು ಆಶಿಸುತ್ತಾರೆ, ಮತ್ತು ವ್ಯಕ್ತಪಡಿಸುತ್ತಾರೆ. ಜೀವನ ಪ್ರೀತಿ ಇಲ್ಲದ ಕಡೆ ಇವಾವುವೂ ಇರಲು ಸಾಧ್ಯವಿಲ್ಲ.

**ಆಡಿ ಬಾ ನನಕಂದ ಅಂಗಾಲ ತೊಳೆದೇನು**
**ತೆಂಗೀನಕಾಯ ತಿಳಿನೀರ । ತಕ್ಕೊಂಡು ।**
**ಬಂಗಾರದ ಮೋರೆ ತೊಳೆದೇನು ।।**

ತಾಯಿಯೊಬ್ಬಳ ನಿಷ್ಕಲ್ಮಷ, ಮುಗ್ಧ ಪ್ರೀತಿಗೆ ಈ ತ್ರಿಪದಿ ಸಾಕ್ಷಿ. ತೆಂಗಿನಕಾಯಿಯ ತಿಳಿನೀರಿನಲ್ಲಿ ತನ್ನ ಮುದ್ದು ಕಂದನ ಬಂಗಾರದ ಮುಖವನ್ನು ತೊಳೆಯುವ ಆಸೆ ಅವಳದ್ದು. ಅಂತಹ ಭಾವನೆ ವ್ಯಕ್ತಗೊಳ್ಳುವುದು ಶುದ್ಧ ಹಾಗೂ ಮುಗ್ಧ ಮನಸ್ಸಿನಿಂದ ಮಾತ್ರ.

ಜನಪದರ ಮುಗ್ಧ ಭಕ್ತಿಗೆ ಸಾಕ್ಷಿ ಅವರು ದೇವರೊಂದಿಗೆ ನೇರ ಸಂಭಾಷಣೆ ನಡೆಸುತ್ತ ತಮ್ಮ ಸುಖ–ದುಃಖವನ್ನು ಅವನೊಂದಿಗೆ ತೋಡಿಕೊಳ್ಳುವುದು. ಅವರ ದೃಷ್ಟಿಯಲ್ಲಿ ದೇವರು ಎಲ್ಲಿಯೋ ಇಲ್ಲ , ಇಲ್ಲಿಯೇ ಇದ್ದಾನೆ ಎಂಬ ನಂಬಿಕೆ. ಶ್ರದ್ಧೆ ಹಾಗಾಗಿಯೇ ಅವನನ್ನು ಆತ್ಮೀಯ ಬಂಧುವಿನಂತೆ ಕಾಣುತ್ತಾರೆ, ಮಾತನಾಡಿಸುತ್ತಾರೆ, ಪೂಜಿಸಿ ಕೈಲಾದುದನ್ನು ಅರ್ಪಿಸಿ ತೃಪ್ತಿ ಹೊಂದುತ್ತಾರೆ. ಎಲ್ಲವನ್ನೂ ಅವನಿಗೆ ಅರ್ಪಿಸಿಯಾಯಿತೆಂಬ ನೆಮ್ಮದಿಯಿಂದ ಬಾಳ್ವೆ ನಡೆಸುತ್ತಾರೆ. ದುಃಖವಾದಾಗ, ಸಂತೋಷವಾದಾಗ ಬೇಡುತ್ತಾರೆ, ಕಾಡುತ್ತಾರೆ, ಹಾಗೆಯೇ ಕಡುಕಷ್ಟ ಉಂಟಾದಾಗ ದೇವರನ್ನು ಬಯ್ಯುವುದೂ ಉಂಟು. ಅಷ್ಟೊಂದು ಸಲಿಗೆ ಅವರದ್ದು:

**ಯಾಕೆ ಪಾರ್ವತಿ ಕೋಪವು ನನಮೇಲೆ**
**ಲೋಕದವರೆಲ್ಲ ಇಡಿಹೊನ್ನ । ತಂದವರೆ ।**
**ನಾ ದೂಪದರುಳಿಕ್ಕಿ ಶರಣಂದಿ ।।**

**ಬಡವೆ ಬಂದಿವ್ನಿ ಒಡೆಯ ಬಾಗಿಲು ತೆಗಿ**
**ತೊಟ್ಟೀಲು ಬಂದು ತಳಗಾದೆ । ಮಲ್ಲಯ್ಯ ।**
**ನೀ ಒಪ್ಪಿದಯೆಸರ ಕರಿಯಯ್ಯ ।।**

**ಕರುಣೆ ಬಂದರೆ ಕಾಯೊ ಮರಣ ಬಂದರೆ ಒಯ್ಯೊ ।**
**ಕರುಣಿ ಕಲ್ಯಾಣಿ ಬಸವಣ್ಣ । ಕಾಸಿಲಿಂಗ ।**
**ಕಡೆತನಕ ಕಾಯೊ ಅಭಿಮಾನ ।।**

ಈ ಭಾವ, ಭಕ್ತಿ, ಶ್ರದ್ಧೆ 'ಕಡೆತನಕ ಕಾಯೊ ಅಭಿಮಾನ' ಎಂಬ ಆದರ್ಶ ಇವೆಲ್ಲವೂ ನೈತಿಕತೆಯಿಂದ ಕೂಡಿದ ಬದುಕಿನಿಂದ ಮಾತ್ರ ಸಾಧ್ಯ.

ಜನಪದ ಜೀವನದಲ್ಲಿ ದೇವರು, ಧರ್ಮ, ಅಧ್ಯಾತ್ಮ ಇವುಗಳು ಯಾವಾಗಲೋ ಬಂದು ಯಾವಾಗಲೋ ಹೋಗುವಂತಹವುಗಳಲ್ಲ. ಅವರ ಬದುಕಿನ ಪ್ರತಿಯೊಂದು ಸಂದರ್ಭದಲ್ಲಿಯೂ ಅವು ಅವತರಿಸುತ್ತವೆ. ಪ್ರತಿಯೊಂದು ಮಾತಿನಲ್ಲಿಯೂ ಅವುಗಳ ಆಶಯ ಒಳಹೊಕ್ಕಂತಿರುತ್ತದೆ. 'ಗಾದೆ ವೇದಕ್ಕೆ ಸಮ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ' ಎಂಬಂತಹ ಅವರ ಗಾದೆ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ:



**ಅನ್ನ ಹಾಕಿದ ಮನೆ ಕೆಡಲ್ಲ**
**ಗೊಬ್ರ ಹಾಕಿದ ಹೊಲ ಕೆಡಲ್ಲ**

**ಮಾವ ಕೊಟ್ಟದ್ದು ಮನೆತನಕ**
**ದೇವರು ಕೊಟ್ಟದ್ದು ಕೊನೆತನಕ**

**ಉಪ್ಪು ತಿಂದವನು ನೀರು ಕುಡಿತಾನೆ**
**ಮಾಡಿದ್ದುಣ್ಣೋ ಮಹರಾಯ**

ನೈತಿಕತೆಯಿಂದ ಕೂಡಿದ ಇಂತಹ ಆಲೋಚನೆಗಳು, ಭಾವನೆಗಳು ಆತ್ಮಶುದ್ಧಿಯಿಂದ, ಸಂಸ್ಕಾರಯುತ ಬದುಕಿನಿಂದ ಹೊರಹೊಮ್ಮಿದವು. ಒಂದು ಶ್ರೇಷ್ಠ ಸಂಸ್ಕಾರದ, ಸಂಸ್ಕೃತಿಯ ಪ್ರತೀಕವೆನಿಸಿದವುಗಳು. ಅದರಲ್ಲಿ ಆಧ್ಯಾತ್ಮಿಕ ಸ್ಪರ್ಶ ಇಲ್ಲವೆನ್ನುವುದಾದರೂ ಹೇಗೆ? ಸ್ವಾಮಿ ವಿವೇಕಾನಂದರು ಶಿಷ್ಯನೊಬ್ಬನಿಗೆ ಹೇಳಿದ ಮಾತು ಇಲ್ಲಿ ಪ್ರಸ್ತುತ ಅನ್ನಿಸುತ್ತದೆ: ಆತ ಧ್ಯಾನಾಸಕ್ತನಾಗಲು ಬಯಸಿ, ಧ್ಯಾನಕ್ಕೆ ಕುಳಿತ. ಎಷ್ಟೇ ಪ್ರಯತ್ನಿಸಿದರೂ ಅವನಿಗೆ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಸ್ವಾಮೀಜಿಯ ಬಳಿ ಬಂದು ತನ್ನ ಅಳಲನ್ನು ತೋಡಿಕೊಂಡ. ಆಗ ಸ್ವಾಮೀಜಿ ಅವನಿಗೆ ಹೇಳಿದ್ದು ಹೀಗೆ: ''ಮಗು ಕೊಠಡಿಯಿಂದ ಹೊರಗಡೆ ಬಾ. ದೇವರು ನಾಲ್ಕು ಗೋಡೆಗಳ ಮಧ್ಯೆ ಇಲ್ಲ. ಹೊರಜಗತ್ತನ್ನು ನೋಡು. ಮನದ ಕಿಟಿಕಿ ಬಾಗಿಲುಗಳನ್ನೂ ತೆರೆ. ಹಸಿದವರು, ಅಸಹಾಯಕರು, ಅಜ್ಞಾನಿಗಳು ನಿನ್ನ ಸುತ್ತಮುತ್ತ ಇದ್ದಾರೆ. ಅವರ ಸೇವೆ ಮಾಡು. ಹಸಿದವರಿಗೆ ಅನ್ನ ನೀಡು, ಅಜ್ಞಾನಿಗಳಿಗೆ ಜ್ಞಾನ ನೀಡು, ರೋಗಿಗಳ ಶುಶ್ರೂಷೆ ಮಾಡು. ಅಲ್ಲಿಯೇ ದೇವರಿದ್ದಾನೆ'' ಎಂದು. ಸೇವೆಯ ಮೂಲಕ ದೇವರನ್ನು ಕಾಣು. ಮೌಲ್ಯಾಧಾರಿತ ಬದುಕೇ ಆಧ್ಯಾತ್ಮಿಕ ಬದುಕು. ಅದರಿಂದ ಉಂಟಾಗುವ ಸಂತೋಷ, ಸಿಕ್ಕುವ ನೆಮ್ಮದಿ ಮನಸ್ಸನ್ನು ಅಧ್ಯಾತ್ಮದ ಕಡೆಗೆ ಕೊಂಡೊಯ್ಯಬಲ್ಲದು: **'ಶಿವಭಾವದಲ್ಲಿ ಜೀವಸೇವೆ'** ಮಾಡುವುದೇ ನಿಜವಾದ ಭಕ್ತಿ, ಪೂಜೆ ಎಲ್ಲವೂ.

ಇಂದಿನ ಗೃಹಸ್ಥ ಜೀವನದಲ್ಲಿ ಅಲ್ಲೋಲಕಲ್ಲೋಲ ಉಂಟಾಗುತ್ತಿರುವುದನ್ನು ಕಾಣುತ್ತಿದ್ದೇವೆ. ನೆಮ್ಮದಿಯ, ಸಂತೃಪ್ತಿಯ ಬಾಳು ಇಂದು ಕನಸಿನದಾಗಿದೆ. ಅತೃಪ್ತಿ, ಅಸಮಧಾನ, ಅಸಂತೋಷ ಮೇಲುಗೈ ಸಾಧಿಸಿ ಗೃಹಸ್ಥ ಜೀವನವನ್ನು ಹತ್ತು ಹಲವು ಸಮಸ್ಯೆಗಳಲ್ಲಿ ಮುಳುಗಿಸಿದೆ. ನಮ್ಮ ಆಸೆ ಆಕಾಂಕ್ಷೆಗಳು ಮಿತಿಮೀರಿ ಎತ್ತರಕ್ಕೆ-ಎಟುಕಲಾರದ ಎತ್ತರಕ್ಕೆ ಏರುತ್ತಲೇ ಸಾಗಿದೆ. ಆದರ್ಶದ ಬದುಕು ಮಾಯವಾಗಿದೆ. ನೈತಿಕತೆ ಕುಸಿದಿದೆ. ಮನಸ್ಸಿನ ನಿಯಂತ್ರಣ ತಪ್ಪಿದಂತಾಗಿದೆ. ಹೊರಜಗತ್ತಿನ ಆಕರ್ಷಣೆಗಳು ಹೆಚ್ಚಾಗಿ, ಒಳಮನಸ್ಸಿನ ತಳಮಳ ಹೆಚ್ಚಾಗಿದೆ. ಪ್ರೀತಿ, ಪ್ರೇಮ, ವಿಶ್ವಾಸ, ಆತ್ಮೀಯತೆ, ಸ್ನೇಹಸಂಬಂಧ, ಆದರ್ಶ, ಬಂಧುತ್ವ, ದೇವರು, ಧರ್ಮ, ಭಕ್ತಿ ಮುಂತಾದವು ತಮ್ಮ ನಿಜವಾದ ಅರ್ಥವನ್ನು ಕಳೆದುಕೊಂಡಿವೆ. ಇವುಗಳೆಲ್ಲದರ ಪರಿಣಾಮ - ವೃದ್ಧಾಶ್ರಮಗಳು ಹೆಚ್ಚಾಗುತ್ತಿವೆ. ಆತ್ಮಹತ್ಯೆ ಪ್ರಕರಣಗಳು ವೃದ್ಧಿಸುವಂತಾಗಿದೆ, ವಿವಾಹ ವಿಚ್ಛೇದನ ಮಿತಿಮೀರಿ ಹೋಗುತ್ತಿದೆ. ಶಾಂತಿ, ನೆಮ್ಮದಿ, ಸಹಬಾಳ್ವೆ ಮಿಂಚಿ ಮಾಯವಾಗುತ್ತಿವೆ. ಭ್ರಷ್ಟಾಚಾರ ಸಮಾಜಕ್ಕೆ ದೊಡ್ಡ ಕಂಟಕವಾಗಿದೆ. ಮೋಸ ವಂಚನೆಯಂತಹವು ತಾಂಡವವಾಡುತ್ತಿವೆ. ಕೊಳ್ಳುಬಾಕ ಸಂಸ್ಕೃತಿ ಮಿತಿಮೀರುತ್ತಿದೆ. ಇವೆಲ್ಲಕ್ಕೂ ತಡೆಯುಂಟುಮಾಡಲು ಇರುವ ಒಂದೇ ಒಂದು ಮಾರ್ಗ — ಗೃಹಸ್ಥ ಜೀವನದಲ್ಲಿ ಮೌಲ್ಯಗಳ, ಆದರ್ಶಗಳ ಬಿತ್ತನೆ.

ಜನಪದ ಜೀವನದ ಆದರ್ಶ, ಜೀವನ ಮೌಲ್ಯಗಳು ಇಂದು ಮರುಕಳಿಸಬೇಕಾಗಿದೆ. ಅಲ್ಲಿಯ ನೆಮ್ಮದಿಯ ಜೀವನ ಇಂದು ಮರೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಗೃಹಸ್ಥ ಧರ್ಮದ ನಿಯಮಗಳನ್ನು ಪಾಲಿಸದೆ ಇದು ಸಾಧ್ಯವಾಗದು. ಏಕೆಂದರೆ, 'ಗೃಹಸ್ಥಾಶ್ರಮ' ನಿಜಕ್ಕೂ ಅದು ನಮ್ಮೆಲ್ಲ ಕಲಿಕೆಗಳ ಕೇಂದ್ರ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಅಲ್ಲಿ ಮೂರು ವರ್ಷ ಶ್ರದ್ಧೆಯಿಂದ ಕಲಿತ ಪಾಠ ಮುಂದೆ ನೂರು ವರ್ಷಗಳವರೆಗೆ ವ್ಯಕ್ತಿಯನ್ನು ಕಾಯುತ್ತದೆ. ಅಷ್ಟೇ ಅಲ್ಲ ಇಡೀ ಸಮಾಜಕ್ಕೆ, ರಾಷ್ಟ್ರಕ್ಕೆ ದೊಡ್ಡ ಕೊಡುಗೆಯನ್ನು ಕೊಟ್ಟಂತಾಗುತ್ತದೆ.

ಶ್ರೀರಾಮಕೃಷ್ಣರು ಹೇಳುವ ಒಂದು ಕಥೆ ಇಲ್ಲಿ ಪ್ರಸ್ತುತವೆನಿಸುತ್ತದೆ. ಅದರಲ್ಲಿ ಅವರು ನಮ್ಮ ಇಂದಿನ ದುಃಸ್ಥಿತಿಗೆ ಕಾರಣಗಳೇನು ಎಂಬುದನ್ನು ಸ್ವಾರಸ್ಯವಾಗಿ ಹೇಳಿದ್ದಾರೆ, ಧ್ವನಿಪೂರ್ಣವಾಗಿ ವಿವರಿಸಿದ್ದಾರೆ:

''ಒಂದೂರಿನಲ್ಲಿ ಬೆಸ್ತನೊಬ್ಬ ಮೀನುಗಳನ್ನು ಹಿಡಿದು ಜೀವನ ನಡೆಸುತ್ತಿದ್ದ. ಒಂದು ಹದ್ದು ಹಾರಿ ಬಂದು ಮೀನನ್ನು ಕಚ್ಚಿಕೊಂಡು ಹಾರಿತು. ಮೀನನ್ನು ಕಂಡ ಒಡನೆಯೆ ನೂರಾರು ಕಾಗೆಗಳು ಅದನ್ನು ಕಸಿದುಕೊಳ್ಳಲು ಕೂಗಾಟವೆಬ್ಬಿಸಿದುವು. ಹದ್ದು ಎತ್ತ ಹಾರಿದರೂ ಅವು ಅದನ್ನು ಹಿಂಬಾಲಿಸಿದುವು. ಎತ್ತ ಹಾರಿದರೂ ಅವು ಅತ್ತ ಹಾರುತ್ತಿದ್ದುವು. ಹದ್ದು ಗಾಬರಿಗೊಂಡು ಸಿಕ್ಕ ಸಿಕ್ಕ ಕಡೆಗೆ ಹಾರಾಡುವ ಸಂದರ್ಭದಲ್ಲಿ ತನ್ನ ಕೊಕ್ಕಿನಲ್ಲಿದ್ದ ಮೀನು ಕೆಳಗೆ ಬಿತ್ತು. ನಂತರ ಕಾಗೆಗಳು ಹದ್ದನ್ನು ಹಿಂಬಾಲಿಸುವುದು ಬಿಟ್ಟು ಮೀನನ್ನು ಹಿಂಬಾಲಿಸತೊಡಗಿದವು. ಈ ಗೊಂದಲದಿಂದ ಪಾರಾದ ಮೇಲೆ ಹದ್ದು ಒಂದು ಮರದ ಮೇಲೆ ಕುಳಿತು ಯೋಚಿಸತೊಡಗಿತು: 'ಈ ಅನಿಷ್ಟ ಮೀನಿನಿಂದ ತಾನೇ ಇಷ್ಟೆಲ್ಲ ಆದದ್ದು, ಈಗ ಅದನ್ನು ಎಸೆದಿರುವೆನು, ಇನ್ನಾದರೂ ನೆಮ್ಮದಿಯಿಂದಿರಬಹುದು' ಎಂದು ಸಂತೋಷಪಟ್ಟಿತು. ಅಂದರೆ

ಎಲ್ಲಿಯ ವರೆಗೆ ಈ ಪ್ರಾಪಂಚಿಕ ಆಸೆ ಆಕಾಂಕ್ಷೆಗಳು ನಮ್ಮನ್ನು ಆವರಿಸಿರುತ್ತದೆಯೋ ಅಲ್ಲಿಯವರೆಗೆ ತೊಂದರೆ ತಾಪತ್ರಯಗಳು ತಪ್ಪಿದ್ದಲ್ಲ. ಯಾವಾಗ ನಾವು ಅದನ್ನು ದೂರವಿಡುತ್ತೇವೆಯೋ ಆಗ ಎಲ್ಲ ಗಡಿಬಿಡಿಯಿಂದ ಪಾರಾಗಿ, ನೆಮ್ಮದಿಯನ್ನು ಕಾಣ ಬಹುದು.''

ಅಂದರೆ, ಎಲ್ಲವನ್ನೂ ತ್ಯಜಿಸಿ ಬದುಕಬೇಕೆಂದಲ್ಲ. ಗೃಹಸ್ಥ ಧರ್ಮದಲ್ಲಿ ಇದ್ದುಕೊಂಡೂ ಶಾಂತಿಯುತವಾದ, ನ್ಯಾಯಬದ್ಧ ವಾದ ನೈತಿಕ ಜೀವನವನ್ನು ನಡೆಸುವುದು ಹೇಗೆ ಎಂಬುದನ್ನು ಕಲಿಯಬೇಕಾಗಿದೆ. ಇದಕ್ಕೆ ಮುಖ್ಯವಾಗಿ ಬೇಕಾದದ್ದು ಸ್ವಾರ್ಥ ರಹಿತವಾದ, ಸಂಯಮದ ಜೀವನ. ಜನಪದರು ಬಯಸುವಂತೆ 'ಹಾಸಿಗೆ ಇದ್ದಷ್ಟು ಕಾಲು ಚಾಚುವ', 'ಅತಿಯಾಸೆ ಗತಿಗೇಡು' ಎಂಬ ಅರಿವಿನ, 'ಉಪ್ಪು ತಿಂದ ಮೇಲೆ ನೀರು ಕುಡಿಯಬೇಕಾಗು ತ್ತದೆ' ಎಂಬ ಎಚ್ಚರದ ನಡಿಗೆಯನ್ನು ಇಡುವುದು ಒಳ್ಳೆಯದು. ಆದರ್ಶದ, ನೈತಿಕತೆಯಿಂದ ಕೂಡಿದ ಬದುಕು ಯಾವಾಗಲೂ ಶಾಂತಿ, ನೆಮ್ಮದಿಗಳಿಗೆ ಕಾರಣವಾಗುತ್ತದೆ ಎಂಬುದನ್ನು ಮರೆಯ ಬಾರದು.

ಜನಪದರ ಬದುಕಿನಲ್ಲಿ ನೀತಿ, ನ್ಯಾಯ, ಧರ್ಮ, ದೇವರ ಬಗ್ಗೆ ಭಯಭಕ್ತಿ ಹೆಚ್ಚಾಗಿಯೇ ಇತ್ತು. ಅಲ್ಲಿ ಯಾರೇ ಆಗಲಿ ಆಡಿದ ಮಾತಿಗೆ ಬೆಲೆ ಇತ್ತು. ಅದನ್ನು ಗೌರವಿಸಿ ಪಾಲಿಸುವ ಮನೋಧರ್ಮವಿತ್ತು. ಆಧ್ಯಾತ್ಮಿಕ ಬದುಕಿಗೆ ಇದಕ್ಕಿಂತ ಹೆಚ್ಚಿನದು ಬೇಕಾಗಿಲ್ಲ. ಇವೆಲ್ಲವೂ ಇಂದು ನಶಿಸುತ್ತಿರುವಂತೆ ಕಾಣುತ್ತಿದೆ. ಎಲ್ಲ ಅಶಾಂತಿಗೂ ಕಾರಣವಾಗಿರುವುದು ಅದೇ. 'ತಾನೂ ಬದುಕಬೇಕು, ಇತರರನ್ನೂ ಬದುಕುವುದಕ್ಕೆ ಬಿಡಬೇಕು' ಎಂಬ ನೀತಿಯನ್ನು ಅನುಸರಿಸಿದರೆ ಎಲ್ಲವೂ ಸರಿಹೋಗುತ್ತದೆ. ಅದಕ್ಕೆ ವಿಶಾಲ ಮನೋಭಾವದ ಅಗತ್ಯವಿದೆ. ಅದಕ್ಕೆ ಸಿದ್ಧತೆ ಬೇಕಾಗು ತ್ತದೆ, ಬದ್ಧತೆಯೂ ಇರಬೇಕಾಗುತ್ತದೆ:

**ಇತರರಿಗಾಗಿ ಮಾಡಿದ**
**ಒಂದೇ ಒಂದು ಒಳ್ಳೆಯ ಕಾರ್ಯವೂ**
**ನಿನ್ನೊಳಗಣ ಅನಂತ ಶಕ್ತಿಯನ್ನು ಜಾಗೃತಗೊಳಿಸುತ್ತದೆ**
**ಕ್ರಮೇಣ ನೀನೊಬ್ಬ ಸಿಂಹಸದೃಶ ವ್ಯಕ್ತಿಯೇ ಆಗುವೆ**
**ಪರೋಪಕಾರದ ಪ್ರಭಾವವೇ ಅಂತಹುದು !**

ಸ್ವಾಮಿ ವಿವೇಕಾನಂದರ ಈ ಅಮೃತವಾಣಿ ನೆನಪಿದ್ದರೆ ಸಾಕು ಜೀವನದಲ್ಲಿ ಅದೆಷ್ಟೋ ಸಾರ್ಥಕ ಕಾರ್ಯಗಳು ಸಾಧಿತವಾಗು ತ್ತವೆ. ಆತ್ಮೋದ್ಧಾರವೂ ಆದಂತಾಗುತ್ತದೆ. ಆದರ್ಶವಿರುವ ವ್ಯಕ್ತಿ ಸಾವಿರ ತಪ್ಪು ಮಾಡಿದರೆ, ಆದರ್ಶವಿಲ್ಲದವ ಐದು ಸಾವಿರ ತಪ್ಪು ಮಾಡುತ್ತಾನೆ. ಆದ್ದರಿಂದ ಒಂದು ಆದರ್ಶವಿಟ್ಟುಕೊಳ್ಳುವುದು ಒಳ್ಳೆಯದು ಎಂಬ ವಿವೇಕಾನಂದರ ಮಾತೂ ಕೂಡ ಆದರ್ಶದ ಬದುಕಿಗೆ ದಾರಿಮಾಡಿಕೊಡುತ್ತದೆ. ಆದರ್ಶವಿರುವೆಡೆ ಅಧ್ಯಾ ತ್ಮದ ಸ್ಪರ್ಶ ಇದ್ದೇ ಇರುತ್ತದೆ.



ಜನಪದರ ಆದರ್ಶದ ಬದುಕಿಗೆ, ಲೌಕಿಕ–ಧಾರ್ಮಿಕ ಸಮ ನ್ವಯದ ಬದುಕಿಗೆ, 'ಮಾನೌಮಿ' ಸಂದರ್ಭದಲ್ಲಿ 'ದೀಪದಿಂದ ದೀಪಹಚ್ಚಿ' ಮನೆಮನೆಯ ಬಾಗಿಲಿಗೆ ಹೋಗಿ ಹಾಡಿಹರಸುವ ಈ ಸಮನ್ವಯದ ಹಾಡೇ ಒಂದು ಸ್ಪಷ್ಟ ನಿದರ್ಶನ:

**ಮಳೆ ಬಂದು ಬೆಳೆಯಾಗಿ ಇಳೆ ತಣಿಯಲೆಂದು**
**ತಿಳಿಗೊಳಗಳುಕ್ಕಿ ಗೋವುಗಳು ಕರೆಯಲೆಂದು**
**ನಳಿನ ಮುಖಿಯರು ಸುಪುತ್ರರ ಪಡೆಯಲೆಂದು**
**ಬಣ್ಣ ಬಂಗಾರ ಪುಣ್ಯವು ಹೆಚ್ಚಲೆಂದು..**

ಜನಪದ ಜೀವನದಲ್ಲಿ ಕಾಣಿಸಿಕೊಂಡ ಲೌಕಿಕ–ಅಧ್ಯಾತ್ಮ ಸಮನ್ವಯದ ಬದುಕು, ಆಧುನಿಕ ಜೀವನದಲ್ಲಿಯೂ ಕಾಣಿಸಿ ಕೊಳ್ಳಬೇಕಾಗಿದೆ. ಅದಕ್ಕೆ ಗೃಹಸ್ಥಾಶ್ರಮ ಮೊದಲ ಪಾಠಶಾಲೆಯಾಗಿ ವಿಜೃಂಭಿಸಬೇಕಾಗಿದೆ. ಆಗಲೇ ಈಗ ಪರಿವರ್ತನೆಗೊಂಡಿರುವ ಬದುಕಿನಿಂದ ಹೊರಬಂದು ಹೊಸಬದುಕನ್ನು ಕಾಣಲು ಸಾಧ್ಯ. ಇವೆಲ್ಲವೂ ಸಾಧ್ಯವಾಗಲು ನಾವು ಸ್ವಾರ್ಥದ ಬದುಕಿನಿಂದ ಹೊರ ಬರಬೇಕಾಗಿದೆ. ವಿಶಾಲ ಮನೋಭಾವನೆ ಬೆಳೆಯಬೇಕಾಗಿದೆ. ಅನಕ್ಷರಸ್ಥರೆಂದು ಕರೆಸಿಕೊಂಡರೂ ಇವೆಲ್ಲವನ್ನೂ ಬಾಳಸಂಗಾತಿ ಯಾಗಿಸಿಕೊಂಡ ಜನಪದರ ಉದಾರ ಮನೋಭಾವ, ನೈತಿಕ ಬದುಕು, ಆದರ್ಶ ಜೀವನ ಮತ್ತೆ ಮರುಕಳಿಸಬೇಕಾಗಿದೆ.

ಜನಪದ ಗಾದೆಯೊಂದು ಹೀಗಿದೆ: '**ನಾಡು ಬೆಳೆದರೆ ಹಾಡಿ ಕೊಂಡು ಉಣಬಹುದು**' ಎಂದು. ಸ್ವಾರ್ಥ ಅಳಿದಾಗ ಮಾತ್ರ ಇಂಥ ಭಾವನೆಗಳು ಹೊರಹೊಮ್ಮಲು ಸಾಧ್ಯ. '**ನಾಡು ಉಳಿದರೆ ನಾನೂ ಉಳಿದೇನು**' ಎಂಬ ಶ್ರೀಮಂತ ಆಲೋಚನೆಗೆ ಅಡ್ಡಿ ಯಾಗಿರುವುದು ಸ್ವಾರ್ಥ. '**ಬೆರಳು ಬೀಗಿದರೆ ಒನಕೆಯಾದೀತೆ?**' ಎಂಬ ಎಚ್ಚರದ ಬದುಕು ಅಗತ್ಯ. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಒಂದು ನಾಡಿನ ಹಿನ್ನೆಲೆಯಲ್ಲಿ ಅವನಿಗೆ ಮಾನ್ಯತೆಯೇ ಹೊರತು ಅದರ ಹೊರತಾಗಿ ಅಲ್ಲ. ನಮ್ಮ ಮಿತಿಯನ್ನು ಮೀರಿ ನಾವು ವರ್ತಿಸಿದಾಗ ಅದು ನೀತಿಬಾಹಿರವಾಗುತ್ತದೆ, ಅಧರ್ಮದ ದಾರಿ ತುಳಿದಂತಾಗುತ್ತದೆ. '**ಪಾಯಸ ಕುಡಿಯಲು ಯೋಗ್ಯವೇ ಹೊರತು ಸ್ನಾನಕ್ಕಲ್ಲ**' ಎಂಬ ಅದೇ ಜನಪದರ ನಾಣ್ನುಡಿ–ನೀತಿ, ನ್ಯಾಯ, ಧರ್ಮ, ಆದರ್ಶ, ಅಧ್ಯಾತ್ಮದ ಎಲ್ಲ ಪದರಗಳನ್ನೂ ಧ್ವನಿಪೂರ್ಣವಾಗಿ ಅನಾವರಣಗೊಳಿಸುತ್ತದೆ.